ಪಿ.ಜಿ. ರಾಜ್, ಶಿವಮೊಗ್ಗ
*ನೀರಿನ ಸೆಳೆತಕ್ಕೂ, ಹೆಣ್ಣಿನ ಸೆಳೆತಕ್ಕೂ ಇರುವ ವ್ಯತ್ಯಾಸವೇನು?*



ನೀರು ತನ್ನಲ್ಲಿಗೆ ಬಂದವರನ್ನು ಮಾತ್ರ ಸೆಳೆಯುತ್ತದೆ. ಹೆಣ್ಣು ಕೇವಲ ಪೋಸ್ಟರ್‌ನಿಂದಲೂ ಸೆಳೆಯಬಲ್ಲಳು.

ಮಹೇಶ್ ಕೆ. ವಿಭೂತಿ, ಹರಿಹರ
*ಹೆಣ್ಣನ್ನು ಮದುವೆಗೆ ಮೊದಲು ಪ್ರೀತಿಸಬೇಕೋ, ಮದುವೆಯ ನಂತರ ಪ್ರೀತಿಸಬೇಕೋ?*
ಹೃದಯ ಗಟ್ಟಿ ಇದ್ದರೆ ಮೊದಲು ಪ್ರೀತಿಸಿ; ಹಲ್ಲು, ಕಪಾಳ ಗಟ್ಟಿ ಇದ್ದರೆ ನಂತರ ಪ್ರೀತಿಸಿ.

ವೆಂಕಟೇಶ ಇಂಗಳೆ, ರಾಮದುರ್ಗ
*ಬುದ್ಧ, ಬಸವ, ಶಾಸ್ತ್ರಿ ಹುಟ್ಟಿದರೆ ದೇಶದಲ್ಲಿ ಶಾಂತಿ ನೆಲೆಸಬಹುದೆ?*
ಅವರನ್ನು ತಡೆದುಕೊಂಡ ಯಶೋಧರೆ, ಗಂಗಾಂಬಿಕೆ, ಲಲಿತಾ ದೇವಿಯರೂ ಹುಟ್ಟಿದರೆ ಮಾತ್ರ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ನುಡಿದರೆ ಮುತ್ತಿನ ಹಾರದಂತಿರಬೇಕು. ಕುಡಿದರೆ.....?*



‘ವಾಸನೆ ಬಾರದಂತಿರಬೇಕು’ ಎನ್ನುತ್ತಾರೆ ಕವಿ ಡುಂಡಿರಾಜ್.

ಮುಕುಂದ ಹೆರಕಲ್ಲ, ಕಲಬುರ್ಗಿ
*ನಮ್ಮ ರಾಜಕಾರಣಿಗಳ ‘ಡ್ರಾಮಾ ಸೀನಿಯರ್ಸ್’ ಕಾರ್ಯಕ್ರಮ ನಡೆಸಿದರೆ ಯಾರಾದರೂ ಎಲಿಮಿನೇಟ್ ಆಗಬಹುದೆ?*
ಇಬ್ಬರಂತೂ ಎಲಿಮಿನೇಟ್ ಆಗುತ್ತಾರೆ ತೀರ್ಪುಗಾರರು ಮತ್ತು ವೀಕ್ಷಕರು!

ಎ. ಕೃಷ್ಣಾನಂದ ಶೆಟ್ಟಿ, ಐಕಳ
*ಹೆಣ್ಣಿನ ಕೆನ್ನೆಯಲ್ಲಿ ಗುಳಿ ಬಿದ್ದರೆ ಆಕೆಯನ್ನು ಅಂದಗಾರ್ತಿ ಎನ್ನುವರು; ಗಂಡಿನ ಕೆನ್ನೆಯಲ್ಲಿ ಗುಳಿ ಬಿದ್ದರೆ ಹಲ್ಲು ಉದುರಿದೆ ಎನ್ನುವರಲ್ಲಾ?*
ಅದೇ ನಿಜ. ಗುಳಿ ಬೀಳುವವಳನ್ನು ಬೀಳಿಸಿಕೊಳ್ಳಲು ಹೋಗಿ ಕಪಾಳಕ್ಕೆ ಬೀಳಿಸಿಕೊಂಡಿರುತ್ತಾನೆ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ ಮಠ
*ಗೆದ್ದ ಭೀಷ್ಮನಿಂದಲೂ, ಒಲಿದ ಸಾಲ್ವನಿಂದಲೂ ತಿರಸ್ಕೃತಳಾದ ಅಂಬೆಯ ಅತಂತ್ರ ಸ್ಥಿತಿಗೆ ಕಾರಣ ಯಾರು ಸಾರ್?*
ಮನಸ್ಸು ಮಾಡಿದ್ದರೆ ಸ್ಕ್ರಿಪ್ಟ್ ಬದಲಿಸಬಹುದಾಗಿದ್ದ ವೇದವ್ಯಾಸರೇ!

ಮಲ್ಲನಗೌಡ ಸಿ. ಪಾಟೀಲ, ರಂಭಾಪುರ
*ಇಲ್ಲೊಬ್ಬಳು ಬೆನ್ನ ಹಿಂದೆ ‘ರಾಮ್‌ಜೀ 143’ ಅಂತ ಹಚ್ಚೆ ಹಾಕಿಸಿಕೊಂಡಿದ್ದಾಳೆ. ಏಕೆ?*
ಅದಾ! ತನ್ನ ಬೆಕ್ಕಿಗೆ ನನ್ನ ಹೆಸರಿಟ್ಟಿದ್ದಾಳೆ ‘ರಾಮ್‌ಜೀ a cute cat’ ಎಂಬುದೇ ಆ ಹಚ್ಚೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ನರ್ಸ್‌ಗಳನ್ನು ಸಿಸ್ಟರ್ ಎಂದು ಕರೆಯುವ ಮೂಲ ಉದ್ದೇಶ?*
ಕೈಕಾಲಾಡದೆ ಬಿದ್ದಿರುವುದರಿಂದ. ಚಿಗಿತುಕೊಂಡ ತಕ್ಷಣ ಸಿಸ್ಟರ್ ಅಲ್ಲ, ಅಸಿಸ್ಟರ್!

ಜಿ. ಸುಬ್ರಹ್ಮಣ್ಯ, ಬೆಂಗಳೂರು
*ದೇವರ ಚಿತ್ರಗಳಲ್ಲಿ ದೇವ, ದೇವಿಯರಿಗೆ ನಾಲ್ಕು ಕೈಗಳನ್ನು ತೋರಿಸುತ್ತಾರೆ. ನಾಲ್ಕು ಕಾಲುಗಳೇಕಿಲ್ಲ?*
ಕೊಡಕ್ಕೆ ನಾಲ್ಕು ಇರಲಿ, ಓಡಕ್ಕೆ ಎರಡೇ ಸಾಕು ಎಂಬ ಲೆಕ್ಕವಂತೆ.

ಮುರಲೀಧರ ಕುಲಕರ್ಣಿ, ಬೀದರ್
*ಅಂದು ರಾಮನ ಹೆಸರು ಬರೆದ ಕಲ್ಲುಗಳು ನೀರಿನಲ್ಲಿ ತೇಲಿದವು. ಇಂದು ರಾಮ್ ಹೆಸರಿಗೆ ಬರೆದ ಪತ್ರಗಳು ಕ.ಬು. ಸೇರುತ್ತಿವೆಯಲ್ಲ?*
ಇಲ್ಲೂ ಅದೇ ನಿಯಮ; ತೂಕವಿರುವುದು ತೇಲಿ ಅಂಕಣಕ್ಕೆ, ತೂಕವಿಲ್ಲದ್ದು ಕಸದ ಬುಟ್ಟಿಗೆ.

ಎಂ.ಎ. ಕುಮಾರ್, ಬೆಂಗಳೂರು
*ಹೆಣ್ಣು, ಹೊನ್ನು, ಮಣ್ಣು ಗಳಿಸಲು ಏನು ಮಾಡಬೇಕು?*
ಹೊನ್ನು ಗಳಿಸಿ, ಹೆಣ್ಣು ಬರುತ್ತಾಳೆ. ನಂತರ ತಾನಾಗಿಯೇ ಮಣ್ಣು ಬೀಳುತ್ತದೆ.

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು
ಜೀವನವನ್ನು ಗಣಿತಕ್ಕೆ ಹೋಲಿಸುವುದೇಕೆ?
ತುಂಬ ಜನ ಫೇಲ್ ಆಗುವುದರಿಂದ.

ಡಿ.ಎ. ನಳಿನಕುಮಾರಿ, ದಾವಣಗೆರೆ
*ಕೈಮುಗಿದುಕೊಂಡು ಬರುವರೋಟು ಕೇಳಲು; ಗೆದ್ದಮಲಿನಲಿ ಮತದಾರನೆಡೆ ಬೂಟುಕಾಲು; ಕಲಿವುದೆಂದು ನಾವು ತಿರುಗಿ ಒದೆಯಲು?*
ದೇಶವೊಂದೆ ಮುಖ್ಯವೆಂದು ಜಾತಿಪಂಥ ಧನವನೊಗೆದು ಮತವನೀವ ದಿವಸದಂದು.

ವ. ಉಮೇಶ ಕಾರಂತ, ಮಂಗಳೂರು
*ಮುಖ್ಯ ಅತಿಥಿಗಳು ಭಾಷಣ ಮಾಡುವಾಗ ಬೆನ್ನ ಹಿಂದೆ ನಿರ್ವಾಹಕರು ಬಂದು ನಿಲ್ಲುವುದೇಕೆ?*
ಸ್ಟೇಷನ್ ಬಂದರೂ ನಿಲ್ಲದ ರೈಲನ್ನು ನಿಲ್ಲಿಸಲು ಪ್ರಯತ್ನಿಸುವುದಕ್ಕೆ.

ವಿ. ಹಮೀದ್, ವಿಟ್ಲ
*ನನಗೆ ಚುನಾವಣೆಯಲ್ಲಿ ಸ್ಪರ್ಧಿಸುವ ಆಸೆ. ಯಾವ ಚಿಹ್ನೆ ಆರಿಸಿಕೊಳ್ಳಲಿ ಸಾರ್?*




ದೀಪ! ಗೆದ್ದರೆ ಝಗಮಗಿಸಿ; ಸೋತರೆ ಸ್ವಿಚ್ ಆರಿಸಿ ಮಲಗಿ.

ಕೆ.ಜಿ. ಶೇಖರಪ್ಪ, ಅರಸೀಕೆರೆ
*ಕೆಟ್ಟ ವಿಷಯ ಬೇಗ ಪ್ರಸಾರಗೊಳ್ಳುವುದು, ಒಳ್ಳೆಯ ವಿಷಯ ನಿಧಾನವಾಗಿ ಪ್ರಸಾರಗೊಳ್ಳುವುದು ಜಗತ್ತಿನ ನಿಯಮವೇನು?*
ಜಗನಿಯಮವಲ್ಲ; ಮನುಜನ ದೌರ್ಬಲ್ಯ. ಕೆಟ್ಟದ್ದನ್ನು ಗ್ರಹಿಸಲು ಕಿವಿ ಸಾಕು; ಒಳಿತನ್ನು ಗ್ರಹಿಸಲು ಬುದ್ಧಿ ಬೇಕು.

ಆರ್. ಮಧುಸೂದನ್, ಹಾಸನ
*ಮೊದಲ ರಾತ್ರಿಯ ಮಧುಮಂಚಕೆ ಹೂವಿನ ಅಲಂಕಾರ ಅನಿವಾರ್ಯವೆ?*
ಅಹುದು. ನನ್ನ ಮಗಳೂ ಹೂವಿನಂತೆಯೇ, ಮೃದುವಾಗಿ ನಡೆಸಿಕೊ ಎಂಬ ಸಂದೇಶದ ಸಂಕೇತವದು.

■ ರಾಮ್